ಶ್ರೀ ಎಂ.ಎಸ್ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಹುಕ್ಕೇರಿ ಭೂ ನ್ಯಾಯ ಮಂಡಲಿಯಲ್ಲಿ ಗೇಣಿದಾರರಿಂದ ಹಾಗೂ ಜಮೀನಂದಾರರಿಂದ ಬಂದ ಅರ್ಜಿಗಳೆಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಗೇಣಿದಾರರಿಂದ ಬಂದ ಅರ್ಜಿಗಳು ೧೧,೧೦೩ ಎಂದು ಹೇಳಿದ್ದಾರೆ. ಇನ್ನು ಇಲ್ಲಿಯವರೆಗೆ ಗೇಣಿದಾರರ ಪರ ಮತ್ತು ಜಮೀನಂದಾರರ ಪರ ನಿಕಾಲೆಯಾದ ನಿರ್ಣಯಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಜಮೀನುದಾರರಿಂದ ೪೨೬ ಅರ್ಜಿಗಳು ಬಂದಿವೆ ಎಂದು ತಿಳಿಸಿದ್ದಾರೆ. ಲ್ಯಾಂಡ್ ಲಾರ್ಡ್ಸ್ ಪರವಾಗಿ ಎಷ್ಟು ಎಕರೆ ಜಮೀನು ತೀರ್ಮಾನವಾಗಿದೆ. ಲ್ಯಾಂಡ್ ಲಾರ್ಡ್ಸ್, ಲ್ಯಾಂಡ್ ಹೋಲ್ಡಿಂಗ್ಸ್ ಪಡೆದಮೇಲೆ ಬೇರೆಯವರಿಗೆ ಜಮೀನು ಮಾರಿದ್ದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಮಾನ್ಯ ಸದಸ್ಯರು ಕೇಳಿತರಕ್ಕ ವಿವರ ನನ್ನ ಹತ್ತಿರ ಇಲ್ಲ. ಎಷ್ಟು ಟಿನೆಂಟ್‌ಗಳು ಅಪ್ಲಿಕೇಷನ್ ಹಾಕಿದ್ದಾರೆಂದು ಕೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಯಾವ ಗೇಣಿದಾರ ಜಮೀನು ಮಾಡಿಕೊಂಡಿದ್ದಾನೆ ಅದು ನನ್ನ ಗಮನಕ್ಕೆ ಯಾವುದೂ ಬಂದಿಲ್ಲ.

ಶ್ರೀ ಎಂ.ಎಸ್. ಪಾಟೀಲ್.—ಸ್ವಾಮಿ, ಲ್ಯಾಂಡ್ ಟ್ರಿಬ್ಯುನಲ್ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಆ ಪ್ರಶ್ನೆಗೆ ಉತ್ತರ ಅವರಿಗೆ ಗೊತ್ತಿದೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ ನಾನು ಲ್ಯಾಂಡ್ ಟ್ರಿಬ್ಯುನಲ್ ಮೆಂಬರ್ ಆಗಿಲ್ಲ. ಅದಕ್ಕೋಸ್ಕರ ಅಲ್ಲಿ ಯಾವರೀತಿ ಕೆಲಸ ನಡೆಯುತ್ತಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ. ಬೇಗ ಡಿಸ್‌ಪೋಸ್ ಮಾಡಬೇಕು ಎಂದರೆ ಇನ್ನೊಂದು ಟ್ರಿಬ್ಯುನಲ್ ಮಾಡಬೇಕಾಗುತ್ತದೆ.

ಶ್ರೀ ಎಂ.ಎಸ್ ಪಾಟೀಲ್.—ಲ್ಯಾಂಡ್ ಟ್ರಿಬ್ಯುನಲ್ ಹೇಗೆ ಕೆಲಸ ಮಾಡುತ್ತಿದೆ ಎಂದು ಏತಕ್ಕೆ ಪ್ರಶ್ನೆ ಕೇಳಿದ್ದೇನೆ ಎಂದರೆ ಅಲ್ಲಿದ್ದಂಥ ಛೇರ್ಮನ್ ಬದಲಾವಣೆ ಮಾಡಿದ್ದಾರೆ. ಏತಕ್ಕೋಸ್ಕರ ಬದಲಾವಣೆ ಮಾಡಿದ್ದಾರೆ ಎಂದು ಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಆ ಪ್ರಶ್ನೆ ಈ ವಿಚಾರದಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಮಹಾಜನ್ ಶೆಟ್ಟಿ.—ಸ್ವಾಮಿ, ಇಲ್ಲಿ ೧೬ ನೂರು ಅರ್ಜಿಗಳು ಉಳಿದಿದೆ ಎಂದು ಇದೆ. ಅವುಗಳ ಪೈಕಿ ಹುಕ್ಕೇರಿ ತಾಲ್ಲೂಕಿನಲ್ಲಿ ೧೦೦೦ ಅರ್ಜಿಗಳು ಉಳಿದಿವೆ ಎಂದು ಹೇಳಿದ್ದೀರಿ. ಆದರೆ ಇದಕ್ಕಾಗಿ ಇಲ್ಲಿಗೆ ಒಂದು ಅಡಿಷನಲ್ ಟ್ರಿಬ್ಯುನಲ್‌ನ್ನು ಮಾಡುವ ಅವಶ್ಯಕತೆ ಇದೆಯೆಂದು ನನಗೇನೂ ಅನಿಸುವುದಿಲ್ಲ. ಡಿ. ಸಿ. ಯವರು ಪ್ರತಿಯೊಂದು ತಾಲೂಕಿನಲ್ಲೂ ೫೦೦, ೬೦೦ ಪ್ರಕರಣಗಳನ್ನು ಮುಗಿಸಬೇಕೆಂದು ತಿಳಿಸಿದ್ದಾರೆ. ಇದು ನವೆಂಬರ್ ತಿಂಗಳೊಳಗೆ ಮುಗಿಯುವ ಪರಿಸ್ಥಿತಿ ಇರುವುದರಿಂದ ಗೋಕಾಕ, ಬೈಲಹೊಂಗಲ, ಹುಕ್ಕೇರಿ ಇಂಥ ೫-೬ ಊರುಗಳಲ್ಲಿ ಅಡಿಷನಲ್ ಟ್ರಿಬ್ಯುನಲ್‌ಗಳನ್ನು ಮಾಡುವ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಎಂ.ಎಂ. ಖಾರ್ಗೆ.—ಅದು ತಮ್ಮ ಅಭಿಪ್ರಾಯ. ಕೇಸುಗಳು ಕಡಿಮೆ ಇರುವುದರಿಂದ ಅಲ್ಲಿ ಅಡಿಷನಲ್ ಟ್ರಿಬ್ಯುನಲ್ ಮಾಡಬಾರದೆಂದು ತಾವು ಹೇಳುತ್ತಿದ್ದೀರಿ. ಇದು ಒಳ್ಳೆಯ ಸಲಹೆ. ಇದನ್ನು ಪರಿಶೀಲಿಸಿ ಅಲ್ಲಿಗೆ ಬೇಡದಿದ್ದರೆ ಅದನ್ನು ಬೇರೆ ಕಡೆಗೆ ಷಿಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Handlooms covered by Karnataka Handloom Development Corporation Ltd., Bangalore.

470 SRI V. V. PATTAR (Jamakhandi).—Will the Minister for Finance and Tourism be pleased to state.—

(a) the total number of handlooms covered by Handloom Development Corporation and the total number of handlooms (cotton) in Karnataka;

(b) the total number of looms which are left out covered by Karnataka Handloom Development Corporation Limited Bangalore each month since 1980 uptil now;

(c) whether the Government intends to direct handloom Development Corporation to cover more looms in this year?

SRI M. VEERAPPA MOILY (Minister for Finance and Tourism):—

(a) Total number of handlooms (cotton) covered by Karnataka Handloom Development Corporation Ltd. is 8,720. Total number of handlooms in Karnataka 66,926.

(b)—

Month		No. of looms covered.
Upto August 1980	...	7,261
September 1980	...	155
October 1980	...	99
November 1980	...	63
December 1980	...	78
January 1981	...	26
February 1981	...	165
March 1981	...	35
April 1981	...	750
May 1981	...	88

(c) Yes. The Karnataka Handloom Development Corporation Limited has a programme to cover additional 2,500 looms during 1981-82.

ಶ್ರೀ ವಿ. ವಿ. ಪತ್ತಾರ್.—ಸ್ವಾಮಿ, ಈಗ ತಾವು ಕೊಟ್ಟಿರತಕ್ಕ ಉತ್ತರದಲ್ಲಿ ಕರ್ನಾಟಕದಲ್ಲಿ ಒಟ್ಟು ಕಾಟನ್ ಕೈಮಗ್ಗಗಳ ಸಂಖ್ಯೆ ೫೬,೯೨೬ ಎಂದು ತಾವು ಹೇಳಿದ್ದೀರಿ. ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ೫-೬ ವರ್ಷಗಳವರೆಗೆ ಸತತವಾಗಿ ಕೆಲಸಮಾಡಿ ಸುಮಾರು ೮ ಸಾವಿರದಷ್ಟು ನೇಕಾರರನ್ನು ತಮ್ಮ ವ್ಯಾಪ್ತಿಯಲ್ಲಿ ಕೆಲಸಕ್ಕೆ ತೆಗೆದುಕೊಂಡಿದೆ, ಈ ವರ್ಷ ೨೫೦೦ ಜನರನ್ನು ತೆಗೆದು ಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಸರ್ವೇ ಸಾಮಾನ್ಯವಾಗಿ ೬೬ ಸಾವಿರ ಜನರಿಗೆ ಕೊಡಬೇಕಾದರೆ ೩೦ ವರ್ಷಗಳು ಬೇಕಾಗುತ್ತದೆ. ಇದೇ ರೀತಿ ಮಂದಗತಿಯಿಂದ ಹೋಗಿ ೩೦ ವರ್ಷಗಳನ್ನು ತೆಗೆದು ಕೊಳ್ಳುತ್ತೀರೋ ಅಥವಾ ತೀವ್ರವಾಗಿ ಕೈಮಗ್ಗ ಡೆವಲಪ್‌ಮೆಂಟ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತರಲಿಕ್ಕೆ ವಿಶೇಷ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರೋ ?

ಶ್ರೀ ಕಾಗೋಡು ತಿಮ್ಮಪ್ಪ (ಹಣಕಾಸಿನ ಸಚಿವರ ಪರವಾಗಿ).—ಈಗಿರತಕ್ಕ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ೮೧-೮೨ನೇ ಸಾಲಿನಲ್ಲಿ ೨೫೦೦ ಜನರನ್ನು ಡೆವಲ್‌ಮೆಂಟ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತರಬೇಕೆಂದು ಒಂದು ಕಾರ್ಯಕ್ರಮ ಇದೆ. ಅದನ್ನು ಜರೂರಾಗಿ ಕಾರ್ಯಗತಮಾಡುತ್ತೇವೆ. ಆಕಾಶಕ್ಕೆ ನೆಗೆಯಬೇಕೆಂಬ ಆಸೆ ಇದೆ. ಆದರೆ ಅದಕ್ಕೆ ನಮ್ಮಲ್ಲಿ ಶಕ್ತಿ ಇದೆಯೇ ಎಂಬುದನ್ನು ನೋಡ ಬೇಕು. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಬಹಳ ಜನರನ್ನು ಈ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತರುವುದು ಆಗತ್ಯವಿದೆ. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನಷ್ಟು ವಿಸ್ತರಣೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ವಿ. ವಿ. ಪತ್ತಾರ್.—೬೬ ಸಾವಿರ ಜನರನ್ನು ೪–೫ ವರ್ಷದಲ್ಲಿ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತರುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಬೇರೆ ರೀತಿ ಆರ್ಥಿಕ ಸಹಾಯ ಮಾಡುವಾ ಆಗತ್ಯ ಇದೆ. ಅಪೆಕ್ಸ್ ಬ್ಯಾಂಕ್ ಮಂಜೂರಾತರ ಸಾಕಷ್ಟು ಸೌಲಭ್ಯ ಕೊಡುವುದಕ್ಕೆ ಅವಕಾಶ ಇದೆ. ಆದರೆ ಅವರು ಕೊಡುತ್ತಿಲ್ಲ ಆದ್ದರಿಂದ ಅಪೆಕ್ಸ್ ಬ್ಯಾಂಕ್ ಮೂಲಕ ಆಗಲಿ ಅಥವಾ ಇವರಿಗೆ ವೈಯುಕ್ತಿಕವಾಗಿ ಆಗಲಿ ಸಹಾಯ ಮಾಡುತ್ತೀರಾ ? ಅಥವಾ ೧೦ ಅಂಶದ ಕಾರ್ಯಕ್ರಮವನ್ನು ಸರ್ಕಾರದವರು ಈ ನೇಕಾರರಿಗಾಗಿ ಏನು ಹಾಕಿಕೊಂಡಿದ್ದಾರೆ ಅದನ್ನಾದರೂ ಕಾರ್ಯಗತ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಸುಮಾರು ೨೧ ಸಾವಿರ ಕಾಟನ್ ವೀವರ್ಸ್‌ನ್ನು ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಕವರ್ ಮಾಡಬೇಕೆಂದಿದೆ. ಇವರನ್ನು ಬಿಟ್ಟು ಉಳಿದವರನ್ನು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತರಬೇಕೆಂದಿದ್ದೇವೆ. ಇದಕ್ಕೆ ಒಂದು ಟಾರ್ಗೆಟ್ ಇದೆ. ಇದರಲ್ಲಿ ಹೊರತಾದವರನ್ನು ಅಂದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿರತಕ್ಕ ಜನರನ್ನು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತರುವುದಕ್ಕೆ ೩೦ ವರ್ಷಗಳು ಬೇಕಾಗುತ್ತದೆಂದು ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನೊಂದು ಅಂಶಯ ಇದೆ ಅದು ಸರಿ ಯಲ್ಲ. ೨೧ ಸಾವಿರ ಜನರನ್ನು ನಾವು ಈಗಾಗಲೇ ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಅಳವಡಿಸಿ ದ್ದೇವೆ.

ಶ್ರೀ ವಿ. ವಿ. ಪತ್ತಾರ್.—ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಯಾರೂ ಕೂಡ ಕೆಲಸಮಾಡುತ್ತಿಲ್ಲ. ಇದರಿಂದಾಗಿ ನೇಕಾರರಿಗೆ ಯಾವ ಸಹಾಯವೂ ಆಗುತ್ತಿಲ್ಲ. ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ? ಕೋ ಆಪರೇಟಿವ್ ಸೊಸೈಟೀಸ್ ಏನಿವೆ ಇವು ಪೂರ್ಣವಾಗಿ ಟೊಳ್ಳು ಸೊಸೈಟಿ ಗಳು. ಆದ್ದರಿಂದ ನಾನು ಇದನ್ನು ಕೇಳುತ್ತಿದ್ದೇನೆ. ಸರ್ಕಾರದವರು ೧೦ ಅಂಶದ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದಾರೆ. ಅದನ್ನು ಪ್ರಾರಂಭ ಮಾಡಿದರೆ ಎಲ್ಲ ನೇಕಾರರೂ ಒಂದು ಉತ್ತಮ ಜೀವನ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ೧೦ ಅಂಶದ ಕಾರ್ಯಕ್ರಮವನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಕೋ ಆಪರೇಟಿವ್ ಸಕ್ಟಾರ್‌ಗಳು ಕೆಲವು ಕಡೆ ಚೆನ್ನಾಗಿ ಕೆಲಸ ಮಾಡುತ್ತಿವೆ. ಕೆಲವು ಕಡೆ ಚೆನ್ನಾಗಿ ಕೆಲಸಮಾಡುತ್ತಿಲ್ಲ. ಅವು ಚೆನ್ನಾಗಿ ಕೆಲಸಮಾಡಬೇಕೆಂದರೆ ಸ್ಥಳೀಯ ನಾಯಕತ್ವದ ಮೇಲೆ ಅವಲಂಬಿಸಿದೆ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಇದಕ್ಕೆ ಒಂದು ಹೊಸ ಮುಖಿಂದತ್ವ, ಒಂದು ಹೊಸ ಚಾಲನೆಯನ್ನು ಕೊಡುವುದಾದರೆ ಇದನ್ನು ದುರಸ್ತಿ ಮಾಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಒಂದುವೇಳೆ ಇದು ಸಾಧ್ಯವಾಗದಿದ್ದರೆ ಯಾವ ಸರ್ಕಾರೀ ಕ್ಷೇತ್ರದಲ್ಲಿ ಇಂಥ ಅವ್ಯವಸ್ಥೆ ಇದೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದಕ್ಕೆ ಏನು ವ್ಯವಸ್ಥೆ ಮಾಡ ಬೇಕೋ ಅದನ್ನು ಸರ್ಕಾರ ಮಾಡುತ್ತದೆ.

ಶ್ರೀ ವಿ. ವಿ. ಪತ್ತಾರ್.—೧೦ ಅಂಶದ ಕಾರ್ಯಕ್ರಮವನ್ನು ಸರ್ಕಾರ ಒಪ್ಪಿಕೊಂಡಿದೆ. ಅದನ್ನು ಜಾರಿಯಲ್ಲಿ ತಂದರೆ ಸಾಕು. ಇದು ಬಡತನ ರೇಖೆಯಿಂದ ಕೆಳಗಡೆ ಇರತಕ್ಕ ಜನರ ಪ್ರಶ್ನೆ. ಈ ಜನರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕೆ ೧೦ ಅಂಶದ ಕಾರ್ಯಕ್ರಮವನ್ನು ನಾವು ತಯಾರು ಮಾಡಿ ದ್ದೇವೆ. ಆದ್ದರಿಂದ ಇದನ್ನು ಜಾರಿಯಲ್ಲಿ ತರಬೇಕು. ಇವತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಇದಂ ಸಾಧ್ಯವಾಗದಿದ್ದರೆ ಬೊಂಬಾಯಿ ಟೆಕ್ಸ್‌ಟೈಲ್ ಕಮಿಷನರ್‌ರವರು ಏನು ಒಂದು ಪ್ರೊಹಿಬಿಷನ್ ಹುಕುಂ ಮಾಡಿ ಬಣ್ಣದ ಸೀರೆಗಳನ್ನು ಪಪರ್ ಲೂಂನಲ್ಲಿ ನೇಯಬಾರದೆಂದು ಮಾಡಿದ್ದಾರೆ, ಇದನ್ನು ಇಲ್ಲಿಯೂ ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಆದ್ದರಿಂದ ತಾವು ಇದನ್ನು ಜಾರಿಯಲ್ಲಿ ತನಿ . ಹೀಗೆ ತಂದರೆ ಈ ಬಡ ನೇಕಾರರಿಗೆ ಸ್ವಲ್ಪ ಹೆಚ್ಚಿನ ಆದಾಯಬರುತ್ತ ದೆಂದು ನನ್ನ ಸಲಹೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪುವುದರಲ್ಲಿ ಯಾವ ಆತಂಕವೂ ಇಲ್ಲ. ಆದರೆ ನಿರ್ದಿಷ್ಟವಾದ ಸಲಹೆಯನ್ನು ಅವರು ಕೊಡುವುದಾದರೆ ಅದನ್ನು ಸರ್ಕಾರ ಪರಿಶೀಲಿ ಸುತ್ತದೆ.